ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

1. ಮಂಡ್ಯ ಜಿಲ್ಲೆಯಲ್ಲಿ 27 ಪೋಲೀಸ್ ಠಾಣೆಗಳಿವೆ.

2. ಸಿಬ್ಬಂದಿಯ ಕೊರತೆ ಇರುವುದಿಲ್ಲ.

3. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕೆರೆಗಳ ಹೂಳೆತ್ತುವಿಕೆಗೆ ಹಣ ಬಿಡುಗಡೆ

142 (299)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆರೆಗಳ ಹೂಳೆತ್ತುವಿಕೆ, ಬಂಡುಗಳ ನಿರ್ಮಾಣ ಹಾಗೂ ಇತರ ಸಣ್ಣ ನೀರಾವರಿ ಯೋಜನೆಗಳಿಗಾಗಿ ನಿಗಧಿಪಡಿಸಿಲಾದ ಹಣ ಎಷ್ಟು;

ಆ) ರಾಜ್ಯದ ಸಣ್ಣ ನೀರಾವರಿ ಯೋಜನೆಗಳಿಗಾಗಿ ಕೇಂದ್ರ ಸರ್ಕಾರದಿಂದ ಸಾಲವಾಗಿ ಪಡೆಯಲಾದ ಹಣ ಎಷ್ಟು; (ವಿವರ ನೀಡುವುದು)?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಸಣ್ಣ ನೀರಾವರಿ ಕೆರೆಗಳ ಹೂಳೆತ್ತುವಿಕೆಗಾಗಿ 1999-2000ನೇ ಸಾಲಿನಲ್ಲಿ ನಿಗಧಿಪಡಿಸಿರುವ ಹಣ ರೂ.600-00 ಲಕ್ಷ ಅಂತೆಯೇ ಬಂಡುಗಳ ನಿರ್ಮಾಣ ಹಾಗೂ ಇತರ ಎಲ್ಲಾ ಸಣ್ಣ ನೀರಾವರಿ ಯೋಜನೆಗಳಿಗಾಗಿ ನಿಗಧಿಪಡಿಸಿರುವ ಹಣ ರೂ. 10,890.40 ಲಕ್ಷಗಳು

ಆ) ಕೇಂದ್ರ ಸರ್ಕಾರದಿಂದ ಸಾಲ ಪಡೆದಿಲ್ಲ.

ರಾಜ್ಯದಲ್ಲಿ ವಿಚಾರಣಾಧೀನ ಖೈದಿಗಳ ಮರಣ.